ವಿದ್ಯುತ್ ತಂತಿಗಳ ಬಗ್ಗೆ

698(1102); ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವಿದ್ಯುತ್ ತಂತಿ ತಗುಲಿ ಕಳೆದ 3 ವರ್ಷಗಳಿಂದ ಎಷ್ಟು ಜನರು ಮರಣ ಹೊಂದಿರುತ್ತಾರೆ; (ತಾಲ್ಲೂಕುವಾರು ವಿವರ ನೀಡುವುದು);

ಆ) ವಿದ್ಯುತ್ ತಂತಿ ತಗುಲಿ ಮೃತಪಡಲು ಕಾರಣಕರ್ತರಾದ ಇಲಾಖಾ ಸಿಬ್ಬಂದಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ, ವಿವರ ನೀಡುವುದು;

ಇ) ಕಳೆದ ಮುರು ವರ್ಷಗಳಲ್ಲಿ ಚಿಂತಾಮಣಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ತಂತಿ ಅಳವಡಿಸಲು ಮತ್ತು ಗಿಡಗಳನ್ನು ಕಡಿಯಲು ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಿದೆ; (ವಿವರ ಒದಗಿಸುವುದು);

ಈ) ಕಳೆದ 3 ವರ್ಷಗಳಿಂದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವಿದ್ಯುತ್ ಅಭಿವೃದ್ಧಿ ಕಾರ್ಯಗಳಿಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು (ತಾಲ್ಲೂಕುವಾರು ವಿವರ ನೀಡಿ)?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) 2011–12ನೇ ಸಾಲಿನಿಂದ 2014–15ನೇ ಸಾಲಿನ ಜನವರಿ–2015ರ ಅಂತ್ಯದವರೆಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವಿದ್ಯುತ್ ತಂತಿ ತಗುಲಿ 23 ಜನರು ಮರಣ ಹೊಂದಿರುತ್ತಾರೆ.

ತಾಲ್ಲೂಕುವಾರು ವಿವರಗಳು ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ತಾಲ್ಲೂಕು	2011–12	2012–13	2013–14	2014–15 (ಜನವರಿ–2015 ರವರೆಗೆ)
ಚಿಕ್ಕಬಳ್ಳಾಪುರ	0	1	0	2
ಗೌರಿಬಿದನೂರು	1	2	3	0
ಗುಡಿಬಂಡೆ	0	0	0	0
ಬಾಗೇಪಲ್ಲಿ	2	1	0	1
ಚಿಂತಾಮಣಿ	5	0	0	2
ಶಿಡ್ಲಘಟ್ಟ	1	0	1	1
ಒಟ್ಟು	**9**	**4**	**4**	**6**

ಆ) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಬರುವ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಂಬಂಧಿಸಿರುವ ಮಾರಣಾಂತಿಕ ವಿದ್ಯುತ್ ಅಪಘಾತಗಳ ವಿಚಾರಣೆಯನ್ನು ಬೆಸ್ಕಾಂ ವತಿಯಿಂದ ನಡೆಸಲಾಗುತ್ತದೆ.

ವಿದ್ಯುತ್ ಅಪಘಾತಕ್ಕೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಇಲಾಖಾ ವಿಚಾರಣೆಗೆ ಒಳಪಟ್ಟ ನೌಕರರ ವಿವರಗಳು ಕೆಳಕಂಡಂತಿದೆ;

- ದಿನಾಂಕ: 14.04.2011 ರಂದು ಶ್ರೀ ಶ್ರೀನಿವಾಸ್, ಕಿರಿಯ ಮಾರ್ಗದಾಳು, ಪಾತಪಾಳ್ಯ ಶಾಖೆ, ಬಾಗೇಪಲ್ಲಿ ಉಪ ವಿಭಾಗ ರವರು ಡಿ.ಓ.ಎಲ್.ಓ ಜಂಪ್ ಹಾಕುವ ಸಮಯದಲ್ಲಿ ತಂತಿ ತಗುಲಿ ಮೃತ ಹೊಂದಿರುತ್ತಾರೆ. ಇದಕ್ಕೆ ಕಾರಣರಾದ ಶ್ರೀ ಮಂಜುನಾಥ, ಪಾತಪಾಳ್ಯ ಘಟಕ, ಕಿರಿಯ ಇಂಜಿನಿಯರ್, ಬಾಗೇಪಲ್ಲಿ ಉಪವಿಭಾಗ ರವರನ್ನು ಅಮಾನತ್ತುಗೊಳಿಸಿ ನಂತರ ಮರುನೇಮಿಸಲಾಗಿದೆ. ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ.

- ದಿನಾಂಕ: 16.11.2014 ರಂದು ವರದಹಳ್ಳಿ ಗ್ರಾಮದಲ್ಲಿ ವಿದ್ಯುತ್ ತಂತಿ ತಗುಲಿ ಶ್ರೀ ಲಕ್ಷ್ಮೀ ನಾರಾಯಣ ರವರು ಮೃತ ಹೊಂದಿರುತ್ತಾರೆ. ಇದಕ್ಕೆ ಕಾರಣರಾದ ಶ್ರೀರಾಮಪ್ಪ, ಮಾರ್ಗದಾಳು, ಘಟಕ–3, ಚಿಕ್ಕಬಳ್ಳಾಪುರ ನಗರ ಉಪವಿಭಾಗ ರವರನ್ನು ಅಮಾನತ್ತುಗೊಳಿಸಿ ನಂತರ ಮರುನೇಮಿಸಿದ್ದು, ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ.

ಮಾರಣಾಂತಿಕ ವಿದ್ಯುತ್ ಅಪಘಾತಗಳ ವಿಚಾರಣೆ ನಡೆಸಿ ಅಪಘಾತಗಳ ಕಾರಣಗಳನ್ನು ಪರಿಶೀಲಿಸಿ ವಿದ್ಯುತ್ ಸರಬರಾಜು ಕಂಪನಿಗಳ ನೌಕರರು ಜವಾಬ್ದಾರರಾಗಿದ್ದಲ್ಲಿ, ಸದರಿ ನೌಕರರ ಮೇಲೆ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳಲು ಇಲಾಖಾ ವಿಚಾರಣೆಯನ್ನು ನಡೆಸಲಾಗುತ್ತದೆ. ತಪ್ಪಿತಸ್ಥರೆಂದು ಕಂಡು ಬಂದಲ್ಲಿ ಇಲಾಖೆಯ ನಿಯಮಾನುಸಾರ ಶಿಕ್ಷೆಗೆ ಗುರಿಪಡಿಸಲಾಗುತ್ತದೆ.

ಇ) ಚಿಂತಾಮಣಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ತಂತಿ ಅಳವಡಿಸುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ, 2011–12ನೇ ಸಾಲಿನಿಂದ 2014–15ನೇ ಸಾಲಿನ ಜನವರಿ–2015ರ ಅಂತ್ಯದವರೆಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಬಿಡುಗಡೆ ಮಾಡಿದ ಮೊತ್ತದ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ವರ್ಷ	2011–12	2012–13	2013–14	2014–15 (ಜನವರಿ 2015 ರವರೆಗೆ)
ಬಿಡುಗಡೆ ಮಾಡಲಾದ ಮೊತ್ತ (ರೂ. ಲಕ್ಷಗಳಲ್ಲಿ)	39	80.00	54.16	50.00

ಈ) ಚಿಕ್ಕಬಳ್ಳಾಪುರ ಜಿಲ್ಲೆಯ ತಾಲ್ಲೂಕುಗಳಿಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ಅಭಿವೃದ್ಧಿ ಕಾಮಗಾರಿಗಳಾದ ಹೊಸ 11 ಕೆ.ವಿ. ವಿದ್ಯುತ್ ಮಾರ್ಗ, 11 ಕೆ.ವಿ. ಜೋಡಣೆ ಮಾರ್ಗ ಮತ್ತು ಹೆಚ್.ಟಿ ಮತ್ತು ಎಲ್.ಟಿ ಮಾರ್ಗಗಳಲ್ಲಿ ಇರುವ 2/4 ಎ.ಸಿ.ಎಸ್.ಆರ್ ವಾಹಕಗಳನ್ನು ತೆಗೆದು ರ್‍ಯಾಬಿಟ್ ವಾಹಕಗಳಿಗೆ ಬದಲಾವಣೆ ಮಾಡುವುದು, ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸುವುದು ಮತ್ತು ಸುರಕ್ಷತಾ ಕಾಮಗಾರಿಗಳಿಗೆ ಸಂಬಂಧಿಸಿದಂತೆ, 2011–12ನೇ ಸಾಲಿನಿಂದ 2014–15ನೇ ಸಾಲಿನ ಜನವರಿ–2015ರ ಅಂತ್ಯದವರೆಗೆ ಬಿಡುಗಡೆ ಮಾಡಲಾದ ಮೊತ್ತದ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ತಾಲ್ಲೂಕು	2011–12	2012–13	2013–14	2014–15 (ಜನವರಿ–2015 ರವರೆಗೆ)
ಚಿಕ್ಕಬಳ್ಳಾಪುರ	105.00	175.00	228.00	165.00
ಗೌರಿಬಿದನೂರು	85.00	140.00	180.19	153.00
ಗುಡಿಬಂಡೆ	70.00	125.00	145.00	114.00
ಬಾಗೇಪಲ್ಲಿ	80.00	135.00	160.00	118.00
ಚಿಂತಾಮಣಿ	110.00	175.00	300.00	175.00
ಶಿಡ್ಲಘಟ್ಟ	90.00	150.00	222.16	150.00

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವಿದ್ಯುತ್ ಅಭಿವೃದ್ಧಿ ಕಾರ್ಯಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವತಿಯಿಂದ ವಿದ್ಯುತ್ ಅಭಿವೃದ್ಧಿ ಕಾರ್ಯಗಳಿಗೆ 2011–12ನೇ ಸಾಲಿನಿಂದ 2014–15ನೇ ಸಾಲಿನಲ್ಲಿ ಜನವರಿ–15ರ ಅಂತ್ಯದವರೆಗೆ ಮಾಡಲಾಗಿರುವ ವೆಚ್ಚದ ವಿವರಗಳು ಕೆಳಕಂಡಂತಿವೆ:

ವರ್ಷ	ತಾಲ್ಲೂಕು	ವೆಚ್ಚ
2011–12	ಶಿಡ್ಲಘಟ್ಟದಲ್ಲಿರುವ 66/11 ಕೆವಿ ವಿದ್ಯುತ್ ಉಪಕೇಂದ್ರದಲ್ಲಿ 1*12.5 ಎಂ.ವಿ.ಎ. ಪರಿವರ್ತಕವನ್ನು 1*20 ಎಂ.ವಿ.ಎ.ಗೆ ಬದಲಾಯಿಸುವುದು	9.18 ಲಕ್ಷಗಳು
2012–13	ಗೌರಿಬಿದನೂರು ತಾಲ್ಲೂಕಿನ ಪೆರೆಸಂದ್ರದ 66/11 ಕೆವಿ ವಿದ್ಯುತ್ ಉಪಕೇಂದ್ರದಲ್ಲಿ 1*8 ಎಂ.ವಿ.ಎ. ಪರಿವರ್ತಕವನ್ನು 1*12.5 ಎಂ.ವಿ.ಎ.ಗೆ ಬದಲಾಯಿಸುವುದು.	4.19 ಲಕ್ಷಗಳು
2013–14	1. ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥದ 66/11 ಕೆವಿ ವಿದ್ಯುತ್ ಉಪಕೇಂದ್ರದಲ್ಲಿ 1*8 ಎಂ.ವಿ.ಎ. ಪರಿವರ್ತಕವನ್ನು 1*20 ಎಂ.ವಿ.ಎ.ಗೆ ಬದಲಾಯಿಸುವುದು.	28.12 ಲಕ್ಷಗಳು
	2. ಚಿಂತಾಮಣಿ ತಾಲ್ಲೂಕಿನ ತಲಗವಾರ 66/11 ಕೆವಿ ವಿದ್ಯುತ್ ಉಪಕೇಂದ್ರದಲ್ಲಿ 1*12.5 ಎಂ.ವಿ.ಎ. ಪರಿವರ್ತಕವನ್ನು 1*20 ಎಂ.ವಿ.ಎ.ಗೆ ಬದಲಾಯಿಸುವುದು.	6.00 ಲಕ್ಷಗಳು
2014–15 (ಜನವರಿ 2015ರ ಅಂತ್ಯದವರೆಗೆ)	ಗೌರಿಬಿದನೂರುನಲ್ಲಿ ಹೆಚ್ಚುವರಿಯಾಗಿ 100 ಎಂ.ವಿ.ಎ 220/66/11 ಕೆವಿ ಪರಿವರ್ತಕವನ್ನು ಅಳವಡಿಸುವುದು.	311 ಲಕ್ಷಗಳು
	ನಂದಿಯಲ್ಲಿ 1*8 ಎಂವಿಎ, 66/11 ಕೆವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆ	321 ಲಕ್ಷಗಳು